## ಪವಿತ್ರ ಪತ್ರಮಾಲೆ

# ಸ್ವಾಮಿ ಶಿವಾನಂದಜಿ ಅವರ ಒಂದು ಪತ್ರ



**ರಾಮಕೃಷ್ಣ ಮಠ**
**ಬೇಲೂರು, ಹೌರಾ**
**೪.೧.೧೯೧೯**

**ಪ್ರೀತಿಯ...**

ಜನವರಿ ಒಂದನೆಯ ತಾರೀಖಿನ ನಿನ್ನ ಪತ್ರ ಇಂದು ಬಂದು ತಲುಪಿತು. ಅಂಚೆ ಇಲಾಖೆಯ ನಿರ್ಲಕ್ಷ್ಯದಿಂದ ಹೀಗೆ ಆಗಿರಬಹುದು. ಭಗವಂತನ ಅನುಗ್ರಹದಿಂದ ನೀನು ಚೆನ್ನಾಗಿರುವೆಯೆಂದು ತಿಳಿದು ಸಂತೋಷವಾಯಿತು. ನೀನು ಭಗವಂತನ ಸಾನ್ನಿಧ್ಯಕ್ಕೆ ದಿನದಿನವೂ ಹತ್ತಿರ ಸಾಗುತ್ತಿರು ಎಂದು ಪ್ರಾಮಾಣಿಕವಾಗಿ ಪ್ರಾರ್ಥಿಸುತ್ತೇನೆ. ಕೆಲವು ಗುಣಗಳನ್ನು ದಿವ್ಯವಾಗಿಸಲು ಸಾಧ್ಯ. ಅವೆಂದರೆ, ಶ್ರದ್ಧೆ, ಪ್ರೀತಿ, ಭಕ್ತಿ, ಜ್ಞಾನ, ತ್ಯಾಗ, ಕರುಣೆ ಮುಂತಾದವು. ನೀನು ಅವುಗಳನ್ನು ಪಡೆದುಕೊಳ್ಳುವುದಕ್ಕೆ ಅರ್ಹನಾಗಬೇಕೆಂದು ನಾನು ಬಯಸುತ್ತೇನೆ. ಆದರೆ ನೀನಾಗಲೇ ಅವುಗಳಿಗೆ ಅರ್ಹನಾಗಿದ್ದೀಯೆ. ಹೊಸದಾಗಿಯೇನೂ ನೀನು ಅರ್ಹತೆಯನ್ನು ಪಡೆದುಕೊಳ್ಳಬೇಕಾಗಿಲ್ಲ. ಮಗನು ತನ್ನ ತಂದೆಯ ಸಂಪತ್ತನ್ನು ತಾನೇ ತಾನಾಗಿ ಪಡೆದುಕೊಳ್ಳುತ್ತಾನೆ. ಆ ಸಂಪತ್ತು ಏನಿದೆ ಎಂದು ಅವನು ತಿಳಿದುಕೊಂಡರೆ ಸಾಕು. ಭಗವಂತನನ್ನು ನಾನು ಇಷ್ಟೇ ಪ್ರಾರ್ಥಿಸಿಕೊಳ್ಳುತ್ತೇನೆ: ಆ ಸಂಪತ್ತು ಏನು ಎನ್ನುವುದು ನಿನಗೆ ತಿಳಿದುಬರಲಿ ಎಂದು.

ಭಾರತದ ದುಃಖದ ರಾತ್ರಿ ಬಹುಬೇಗನೆ ಕಳೆದುಹೋಗುತ್ತದೆ. ಶ್ರೀರಾಮಕೃಷ್ಣರ ಪ್ರಭಾವ ಆರಂಭವಾಗಿ ಈಗ ಐವತ್ತು ವರ್ಷಗಳಾಗಿದೆಯಷ್ಟೇ. ಈಗಾಗಲೇ ಭಾರತ ಎದ್ದೇಳುತ್ತಿದೆ. ಇದು ಮಾತ್ರ ಎಚ್ಚೆತ್ತುಕೊಳ್ಳುತ್ತಿಲ್ಲ, ಇಡೀ ವಿಶ್ವವೇ ಎಚ್ಚೆತ್ತುಕೊಳ್ಳುತ್ತಿದೆ. ಹಾಗೆಂದೇ ಎಲ್ಲೆಲ್ಲಿಯೂ ಜನರು ಎಂದಿನ ಬೆಳಗನ್ನು ಈಗ ಕಾಣುತ್ತಿಲ್ಲ (ಹೊಸ ಬೆಳಕನ್ನು ಕಾಣುತ್ತಿದ್ದಾರೆ ಎಂದರ್ಥ). ಈಗಿನ ಭಾರತ ನಿನಗೆ ಗೊತ್ತಿರುವ ಹಿಂದಿನ ಭಾರತವಲ್ಲ. 'ರಾಮಕೃಷ್ಣ' ರೆಂಬ ಸೂರ್ಯನು ಭಾರತದ ಆಗಸದಲ್ಲಿ ಮೇಲೇರುತ್ತಿದ್ದಾನೆ. ವಿವೇಕಾನಂದರು ಈ ಸೂರ್ಯನ ಬೆಳಕನ್ನು ಪಾಶ್ಚಾತ್ಯ ಜಗತ್ತಿನ ಆಕಾಶಕ್ಕೂ ಕೊಂಡೊಯ್ದರು. ಪಾಶ್ಚಾತ್ಯ ಆಗಸವೂ ಈಗ ಸ್ಪಷ್ಟವಾಗುತ್ತಲಿದೆ. ವೇದಾಂತವು ಎಲ್ಲವನ್ನೂ ಅಪ್ಪಿಕೊಳ್ಳುವ ಸಿದ್ಧಾಂತ. ಇದು ಪ್ರಪಂಚದ ದೂರದೂರದ ಮೂಲೆಗಳಿಗೂ ಪ್ರಸಾರವಾಗುವುದು. ಈ ಬೆಳವಣಿಗೆ ನಿನಗೆ ಕಾಣುತ್ತಿಲ್ಲವೇನು? ಸುಮ್ಮನೆ ಸಹನೆಯಿಂದ ನೋಡುತ್ತ ಇರು, ಅದು ಹೇಗೆ ಆಗುವುದೆಂದು. ಭಗವಂತನಲ್ಲಿ ಶ್ರದ್ಧೆಯನ್ನು ಇಡು. ಭಗವಂತನು ದಯಾಮಯನು. ಅವನ ಅವತಾರವು ಜಗತ್ತಿಗೆ ಮಂಗಳದಾಯಕವಾಗಿ ಪರಿಣಮಿಸುವುದು. ಹೀಗಿಲ್ಲದೆ ಬೇರೆ ಯಾವ ರೀತಿಯೂ ಆಗಲು ಸಾಧ್ಯವಿಲ್ಲ. ಆದರೆ ಮಾನವಮಾತ್ರದವರು ಈ ಬೆಳವಣಿಗೆ ಆಗುತ್ತಿರುವುದನ್ನು ಕಾಣಲಾರರು. ಕೆಡುಕನ್ನು ಉಂಟುಮಾಡುವ ಸಂಗತಿಗಳೇ ಹೆಚ್ಚಾಗಿವೆ. ಆದರೆ ನೀನು ಸ್ಪಷ್ಟವಾಗಿ ಆಲೋಚನೆ ಮಾಡಿದರೆ, ಭವಿಷ್ಯವು ಉತ್ತಮವಾಗುವ ಸಂಕೇತಗಳನ್ನು ನಿಧಾನವಾಗಿ ಕಾಣುತ್ತೀಯೆ.

ಮಹಾರಾಜ್ (ಸ್ವಾಮಿ ಬ್ರಹ್ಮಾನಂದಜಿ) ನೆನ್ನೆ ಬಹಳ ಕಾಲದ ನಂತರ ಬೇಲೂರು ಮಠಕ್ಕೆ ಹಿಂತಿರುಗಿದರು. ಅವರ ಆರೋಗ್ಯ ಈಗ ಉತ್ತಮಗೊಂಡಿದೆ. ಹರಿ ಮಹಾರಾಜ್ (ಸ್ವಾಮಿ ತುರೀಯಾನಂದಜಿ) ಈಗ ಕೊಲ್ಕತಾದಲ್ಲಿದ್ದಾರೆ. ಅವರ ಆರೋಗ್ಯವೂ ಪರವಾಗಿಲ್ಲ. ಅಖಂಡಾನಂದ ಸ್ವಾಮಿಗಳು ಸಾರಗಾಛಿಯಲ್ಲಿ ತೀವ್ರ ಅನಾರೋಗ್ಯಕ್ಕೆ ಒಳಗಾಗಿದ್ದರು. ಅವರೀಗ ಕೊಲ್ಕತಾದಲ್ಲಿ ಆರೈಕೆಯಲ್ಲಿದ್ದಾರೆ. ಅವರ ಆರೋಗ್ಯ ಕೂಡ ಭಗವಂತನ ದಯದಿಂದ ಉತ್ತಮಗೊಳ್ಳುತ್ತಿದೆ.

ನಿಮಗೆಲ್ಲರಿಗೂ ನನ್ನ ಪ್ರೀತಿ ಮತ್ತು ಶುಭಾಶಯಗಳು.

**ನಿನ್ನವ**
**ಶಿವಾನಂದ**

# ಸಂತ ಶ್ರೇಷ್ಠ ಕವಿ

# ಸ್ವಾಮಿ ವಿವೇಕಾನಂದ

ಜಯಪ್ಪ ಹೊನ್ನಾಳಿ



(*ಹಿಂದಿನ ಸಂಚಿಕೆಯಿಂದ ಮುಂದುವರೆದುದು*)

'ಈಶಾನ್ವೇಷಣೆ' ಎಂಬ, ಒಂದು ರೀತಿಯಲ್ಲಿ ಚರಿತ್ರಾತ್ಮಕವಾದ ಸುದೀರ್ಘ ಕವನವು ಅನುಭವ ಮತ್ತು ಅನುಭಾವದ ಎರಡು ಘಟ್ಟಗಳನ್ನು ಹೊಂದಿದ್ದು, ಸ್ವಾಮೀಜಿಯವರ ಸತ್ಯಾನ್ವೇಷಣೆಯಲ್ಲಿನ ತೀವ್ರ ತೊಳಲಾಟವನ್ನೂ, ಶ್ರೀರಾಮಕೃಷ್ಣರನ್ನು ಅವರು ದರ್ಶಿಸುವುದರೊಂದಿಗೆ ಅವರ ಅನ್ವೇಷಣೆ ಸಾರ್ಥಕತೆ ಪಡೆದುದನ್ನೂ ಮೊದಲ ಘಟ್ಟದಲ್ಲಿ ನಿರೂಪಿಸುತ್ತದೆ. ಹಾಗೆಯೇ ಪರಂಪರೆಯ ಸತ್ವ ಅರಗಿಸಿಕೊಂಡು, ಗುರುವಿನೊಡನೆ ಸ್ವಯಂ ಆತ್ಮಾನುಸಂಧಾನ ನಡೆಸಿದ ವಸ್ತುವಿಷಯವನ್ನು ಅನಾವರಣ ಮಾಡುತ್ತಾ, ಅಸ್ತಿತ್ವಗತವಾಗಿಸಿಕೊಂಡ ತಮ್ಮ ಸ್ವಂತ ಅನುಭವ ಅನುಭಾವಗಳ ಅಭಿವ್ಯಕ್ತಿಯನ್ನು, ನಂತರದ ಅಂದರೆ, ಎರಡನೆ ಘಟ್ಟದಲ್ಲಿ ಸ್ವಾಮೀಜಿ ನಿರೂಪಿಸಿದ್ದಾರೆ.

೧

**ಬೆಟ್ಟಗುಡ್ಡಗಳಲ್ಲಿ, ಪರ್ವತದ ತಪ್ಪಲಲಿ,**
**ಗುಡಿಮಸೀದಿಗಳಲ್ಲಿ, ಚರ್ಚುಗಳಲಿ,**
**ವೇದಶಾಸ್ತ್ರಗಳಲ್ಲಿ, ಬೈಬಲ್ ಕುರಾನಿನಲ್ಲಿ**
**ನಿನ್ನನರಸುತ ನೊಂದೆ ವಿಫಲತೆಯಲಿ.**
**ಮತಪಥಗಳೆಲ್ಲದರ ಪುಣ್ಯ ನಾಮವ ನಾನು**
**ಕರೆಕರೆದು ಕೂಗುತಲಿ ತೇಲುತಿದ್ದೆ;**
**'ನಿಮ್ಮ ಕೃಪೆಯನು ಬೀರಿ ದಿಟಕೆ ದಾರಿಯ ತೋರಿ,**
**ಪರಮಸಿದ್ಧರೆ' ಎಂದು ಬೇಡುತಿದ್ದೆ.**

೨

**..... ಜೀವವೆಲ್ಲವ ಬೆಳಗಿ ಹೊಳೆವ ಕೋಲ್ಮಿಂಚಿನೊಲು**
**ಅನುಭಾವದನುಭವವು ಆತ್ಮದಲ್ಲಿ**
**ಪ್ರವಹಿಸುತ ಹೃದಯಾಂತರಾಳವನೆ ಹೊಕ್ಕಿತ್ತು**
**ಎದೆಯ ಬಾಗಿಲು ತೆರೆದು ಬೆಳಕು ಚೆಲ್ಲಿ !**
**ರಭಸದಲಿ ಹರಿಯುತಿಹ ಈ ಬಾಳ ಹೊಳೆಯಲ್ಲಿ**
**ಸಕಲ ಜೀವದ ಜೀವ ನೀನೆ ವಿಭುವೆ;**
**ಏಕೈಕ ದಿಟದಿರವು ನೀನೆ, ನನ್ನಯ ಗುರುವೆ**
**ನಾನೆಂದು ನಿನ್ನವನು, ನನ್ನ ಒಲವೇ !**
**ಓಂ! ತತ್‌ಸತ್, ಓಂ !**

ನಾವಿಲ್ಲಿಯೇ ಅಂತಲ್ಲ, ಎಲ್ಲೆಡೆಯೂ ವಿಶೇಷ ಸಂವೇದನಾಶೀಲರಾದ, ಶಕ್ತಿಸಂಪನ್ನರೆನಿಸಿ ಅತಿಮಾನವರೆನಿಸಿರುವ ಅಸಾಮಾನ್ಯ ಸ್ವಾಮೀಜಿಯವರ ಪ್ರತಿಭಾ ವಿಶೇಷತೆಯನ್ನೂ ಅಸಾಧಾರಣತೆಯನ್ನೂ ಮೆಚ್ಚದಿರಲಾಗುವುದೇ ಇಲ್ಲ. ದಿನ ದಿನದ ಬೌದ್ಧಿಕ ತಾರ್ಕಿಕ ಸತ್ಯದಿಂದ ಲಭಿಸುವ ತೃಪ್ತಿಯಿಂದಾಚೆಗೆ ಬಾಯಾರಿ ನಿಂತವರ ಮನಸ್ಸಿಗೆ ಈ ಬಗೆಯ ಕಲ್ಪನೆಯ, ಅದರಾಚೆಗೂ ಚಾಚುವ ಅನುಭಾವದ ಭಾವನೆಯ ಕ್ರಿಯೆಯು ಅನಂತ ಅವಕಾಶಗಳನ್ನು ಒದಗಿಸಿದೆ; ಅಗ್ರಾಹ್ಯವಾದದ್ದನ್ನು ಅಂದರೆ ಬುದ್ಧಿಯ ಹಿಡಿತಕ್ಕೆ ಬಾರದ್ದನ್ನು ಅವರ ಮನಸ್ಸು ಆಶಿಸಿ, ಭಾವಿಸಿ, ಕಾಲ್ಪನಿಕತೆಯ ಸಾಧನದಿಂದ ದಕ್ಕಿಸಿಕೊಂಡು ಆನಂದಿಸಿದೆ. ಅತ್ಯಂತ ಸಹಜವಾಗಿ ತನ್ನ ಕಾಲಮಾನದ ಸುಪ್ತಶಕ್ತಿಗಳನ್ನು ಉಪಯೋಗಿಸಿಕೊಂಡು, ಬದುಕಿನ ಅಗಾಧವಾದ ಸತ್ವವನ್ನು ಅಭಿವ್ಯಕ್ತಗೊಳಿಸುವುದು ಇಂಥ ಸರ್ವಶಕ್ತಿವಂತರ ಸುಲಕ್ಷಣ. ಇಂಥ ಸುಲಕ್ಷಣ ಸಂಪನ್ನರಾದ ಸ್ವಾಮೀಜಿಯವರಲ್ಲಿ ಅವರ ಕಾಲದ ಜನರು, ಪರಿಸರ ಹಾಗೂ ದಿನಮಾನಗಳ ಪರಿಣಾಮ ಮೂರ್ತೀಭವಿಸಿದೆ. ಹಾಗಾಗಿಯೇ ಅವರು ಭಾರತ ದೇಶದ ಜನರ ಆತ್ಮದನ್ವೇಷಣೆಯನ್ನು ಹಾಗೂ ಅಭಿವ್ಯಕ್ತಿಯ ಸಾಮರ್ಥ್ಯಗಳನ್ನು ಒಂದು ಜ್ವಲಂತ ಕೇಂದ್ರಕ್ಕೆ ತಂದು ನಿಲ್ಲಿಸಿ, ತಮ್ಮೆಲ್ಲ ಮಾತು, ಕೃತಿ, ಗದ್ಯ-ಪದ್ಯಗಳಲ್ಲಿ ಫಲಪ್ರದವಾಗಿಸಿದ್ದಾರೆ. ಇದನ್ನೇ ಇನ್ನೊಂದು ದಿಕ್ಕಿನ ನೋಟದಿಂದ ಹೇಳುವುದೇ ಆದರೆ, ಸ್ವಾಮೀಜಿ, ಭಾರತದ ದೇಶ ಕಾಲಗಳ ಸಾರಭೂತವಾದ ಗುಣಲಕ್ಷಣಗಳನ್ನೂ, ಭಾರತೀಯರ ಶ್ರೀಮಂತವಾದ ಅನುಭವ ಅನುಭಾವಗಳ